**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ - 454/2019**
**ಚಾಸಾ - 01 / ಪ್ರಾಸಾ - 01**

| | |
|---|---|
| ಹೆಸರು | **ನಾರಾಯಣಪ್ಪ** |
| ತಂದೆಯ ಹೆಸರು | **ನರಸಿಂಹಯ್ಯ** |
| ವಯಸ್ಸು | **58** |
| ಉದ್ಯೋಗ | **ಖಾಸಗಿ ಕೆಲಸ** |
| ವಿಳಾಸ | **ತಾವರೆಕೆರೆ** |

**ದಿನಾಂಕಃ 16-10-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಮೃತ ವ್ಯಕ್ತಿಯು ನನ್ನ ಅಣ್ಣ. 2018 ನೇ ಇಸವಿಯಲ್ಲಿ ಬೆಳಗ್ಗೆ ಸುಮಾರು 8 ರಿಂದ 9 ಗಂಟೆ ಸಮಯದಲ್ಲಿ ಹೊನ್ನಗನಹಟ್ಟಿಯಲ್ಲಿ ದೋಸೆ ಹೋಟಲ್ ಹತ್ತಿರ ಅಪಘಾತ ಆಗಿರುತ್ತದೆ. ಆ ಸಮಯದಲ್ಲಿ ನಾನು ಹೋಟಲ್ ನಲ್ಲಿ ಇದ್ದೇನು ಮತ್ತು ನನ್ನ ಅಣ್ಣ ಅಲ್ಲಿಗೆ ಬೈಕ್ ನಲ್ಲಿ ಬರುತ್ತಿದ್ದರು. ನನಗೆ ಯಾರೋ ಕೂಗಿ ನನ್ನ ಅಣ್ಣ ಬಿದ್ದಿದ್ದಾರೆ ಎಂದು ಹೇಳಿದರು. ನಾನು ಹತ್ತಿರ ಹೋಗಿ ನೋಡಿದಾಗ ಇನೊಂದು ಬೈಕ್ ನವರು ನಮ್ಮ ಅಣ್ಣನಿಗೆ ಗುದ್ದಿ ಓಡಿ ಹೋಗಿದ್ದರು. ನನ್ನ ಅಣ್ಣನ ತಲೆಯ ಹಿಂಭಾಗಕ್ಕೆ ಏಟಾಗಿತ್ತು. ಅವರನ್ನು ನನ್ನ ಸ್ನೇಹಿತರ ವಾಹನದಲ್ಲಿ ಅನುಪಮಾ ಆಸ್ಪತ್ರೆಗೆ ಕರೆದುಕೊಂಡು ಹೋದೆನು. ಅಲ್ಲಿಂದ ಬಿ.ಡಿ.ಎ ಕಾಂಪ್ಲೆಕ್ಸ್ ಬಳಿ ಇರುವ ತ್ರಿನಿಟಿ ಆಸ್ಪತ್ರೆಗೆ ಕರೆದುಕೊಂಡು ಹೋದೆನು. ಅಲ್ಲಿಂದ ಆಂಬುಲೆನ್ಸ್ ನಲ್ಲಿ ಕೊಲಂಬಿಯಾ ಏಷಿಯಾ ಆಸ್ಪತ್ರೆಗೆ ಕರೆದುಕೊಂಡು ಹೋದೆನು. ಅಲ್ಲಿ 2 ದಿನಗಳ ಕಾಲ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತಾರೆ ಮತ್ತು ಚಿಕಿತ್ಸೆ ಫಲಕಾರಿಯಾಗದೇ ಮೃತ ಪಟ್ಟಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಾನು ದೂರನ್ನು ನೀಡಿದ್ದೇನೆ. ಈಗ ಸಾಕ್ಷಿಗೆ ದೂರನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ದೂರನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಂತರ ಪೋಲೀಸರು 2 ವಾಹನಗಳನ್ನು ವಶಪಡಿಸಿಕೊಂಡರು. ಈಗ ಸಾಕ್ಷಿಗೆ ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು

ಗುರುತಿಸಿರುತ್ತಾರೆ. ಪಂಚನಾಮೆಯನ್ನು ನಿಪಿ-2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ 2 ಫೋಟೋಗಳನ್ನು ತೋರಿಸಿದ್ದು, ಅದರಲ್ಲಿ ಇರುವ ವಾಹನವನ್ನು ಪಂಚನಾಮೆ ಮಾಡುವ ಸಮಯದಲ್ಲಿ ವಶಪಡಿಸಿಕೊಳ್ಳಲಾಯಿತು. ಸದರಿ ಫೋಟೋಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ವಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

ಪಾಟೀ **ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿ.21-08-2018 ರಂದು ಬೆಳಗ್ಗೆ ಸುಮಾರು 8.20 ಗಂಟೆ ಸಮಯದಲ್ಲಿ ನೀವು ಹೊನ್ನಗನಹಟ್ಟಿಯ ಎಸ್. ಎಲ್. ಎನ್ ದೋಸೆ ಮನೆಯ ಬಳಿ ಚಾಸಾ-2ರವರ ಜೊತೆಯಲ್ಲಿ ಮಾತನಾಡುತ್ತಾ ನಿಂತಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆಗ ನಿಮ್ಮ ಅಣ್ಣ ತಾವರೆಕೆರೆ ಕಡೆಯಿಂದ ಬೆಂಗಳೂರು ಕಡೆಗೆ ಕೆಎ-02-ಜೆಜಿ-7493 ಬೈಕ್ ನಲ್ಲಿ ಬರುತ್ತಿದ್ದಾಗ ತಾವರೆಕೆರೆ ಕಡೆಯಿಂದ ಕೆಎ-11-ಆರ್-5984 ಬೈಕ್ ಚಾಲಕ ಬೈಕನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮುಂದೆ ಹೋಗುತ್ತಿದ್ದ ನಿಮ್ಮ ಅಣ್ಣನ ಬೈಕಿಗೆ ಹಿಂದಿನಿಂದ ಡಿಕ್ಕಿ ಪಡಿಸಿದ್ದರಿಂದ ನಿಮ್ಮ ಅಣ್ಣ ಬೈಕ್ ಸಮೇತ ಕೆಳಗೆ ಬಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಹತ್ತಿ ಹೋಗಿ ನೋಡಲಾಗಿ ನಿಮ್ಮ ಅಣ್ಣನವರ ತಲೆಗೆ ಬಲವಾದ ಪೆಟ್ಟು ಬಿದ್ದಿತ್ತು ಕೈ ಕಾಲುಗಳಿಗೆ ತರಚಿದ ಗಾಯವಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಂತರ ನೀವು ಮತ್ತು ಚಾಸಾ-2ರವರು ನಿಮ್ಮ ಅಣ್ಣನವರನ್ನು ಯಾವುದೋ ಒಂದು ವಾಹನದಲ್ಲಿ ಬ್ಯಾಡರಹಳ್ಳಿಯ ಅನುಪಮಾ ಆಸ್ಪತ್ರೆಗೆ ಸೇರಿದ್ದು, ಅಲ್ಲಿಂದ ಗಾಯತ್ರಿ ಆಸ್ಪತ್ರೆಗೆ ಸೇರಿಸಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಮ್ಮ ಅಣ್ಣನವರ ತಲೆಗೆ ಬಲವಾದ ಪೆಟ್ಟು ಬಿದ್ದಿದ್ದರಿಂದ ಅವರು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಮ್ಮ ಅಣ್ಣನಿಗೆ ಅಪಘಾತ ಪಡಿಸಿದ 1ನೇ ಆರೋಪಿಯು ಇಂದು ನ್ಯಾಯಾಲಯದ ಮುಂದೆ ಹಾಜರಿದ್ದಾರೆ ಎಂದರೆ ಸಾಕ್ಷಿಯು

ಹೌದು ಎನ್ನುತ್ತಾರೆ.

ನಿಪಿ-1ರ ಆಧಾರದ ಮೇಲೆ ದಿ.21-08-2018 ರಂದು ಸಂಜೆ 5.15 ರಿಂದ 6 ಗಂಟೆ ಸಮಯದವರೆಗೆ ನೀವು ತೋರಿಸಿದ ಜಾಗದಲ್ಲಿ ಪೋಲೀಸರು ನಿಪಿ-2ರಂತೆ ಪಂಚನಾಮೆಯನ್ನು ಮಾಡಿ ನಿಮ್ಮ, ಚಾಸಾ-4 ಮತ್ತು 5ರವರ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಈ ಮೇಲೆ ಹೇಳಿರುವ ವಾಹನಗಳನ್ನು ಪೋಲೀಸರು ವಶಪಡಿಸಿಕೊಂಡರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲೀಸರು ಒಂದು ಕಚ್ಚಾ ನಕ್ಷೆಯನ್ನು ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಅಪಘಾತ ನಡೆದ ಸುಮಾರು 8 ವರ್ಷ ಆಗಿರುವ ಕಾರಣದಿಂದ ಈ ಮೇಲೆ ಹೇಳಿರುವ ವಿಷಯವನ್ನು ಮರೆತ್ತಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಪಾಟೀ **ಸವಾಲುಃ- ಆರೋಪಿಯ ಪರ ಶ್ರೀ.ಎಸ್.ಬಿ , ವಕೀಲರಿಂದಃ-**

ಆರೋಪಿಗಳ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಯಾವುದೇ ಸೂಕ್ತ ಕಾರಣವನ್ನು ತಿಳಿಸದೇ ಇರುವ ಕಾರಣ ಪಾಟೀ ಸವಾಲು ಇರುವುದಿಲ್ಲ ಎಂದು ಪರಿಗಣಿಸಲಾಯಿತು.

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2ನೇ ಅ. ನ್ಯಾ . ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ - 454/2019**
**ಚಾಸಾ - 02 /** ಪ್ರಾಸಾ **- 02**

| | |
|---|---|
| ಹೆಸರು | **ರಾಮಣ್ಣ** |
| ತಂದೆಯ ಹೆಸರು | **ನರಸಿಂಹಯ್ಯ** |
| ವಯಸ್ಸು | **51** |
| ಉದ್ಯೋಗ | **ಚಾಲಕ** |
| ವಿಳಾಸ | **ಚನ್ನೇನಹಳ್ಳಿ** |

**ದಿನಾಂಕಃ 16-10-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಚಾಸಾ-1ರವರು ನನ್ನ ಸ್ನೇಹಿತರು. ದಿ.02-09-2018 ರಂದು ಮೃತ ವ್ಯಕ್ತಿಯು ತಾವರೆಕೆರೆ ಕಡೆಯಿಂದ ಬೈಕ್ ನಲ್ಲಿ ಬರುತ್ತಿದ್ದಾಗ, ಯಾರೋ ಬಂದು ಡಿಕ್ಕಿ ಪಡಿಸಿದ ಪರಿಣಾಮ ಅವರು ಕೆಳಗೆ ಬಿದ್ದರು. ಅದನ್ನು ನಾನು ನೋಡಿರುವುದಿಲ್ಲ. ನಾನು ಮೃತ ವ್ಯಕ್ತಿಗೆ ನೀರನ್ನು ಕುಡಿಸಿ ಕಾರಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದೆನು. ನನಗೆ ಆರೋಪಿಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

ಪಾಟೀ **ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿ.21-08-2018 ರಂದು ಬೆಳಗ್ಗೆ ನೀವು ಮತ್ತು ಚಾಸಾ-1ರವರು ಹೊನ್ನಗನಹಟ್ಟಿಯ ಎಸ್.ಎಲ್.ಎನ್ ದೋಸೆ ಮನೆಯ ಬಳಿ ಮಾತನಾಡುತ್ತಾ ನಿಂತಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಬೆಳಗ್ಗೆ ಸುಮಾರು 8.20ರ ಸಮಯದಲ್ಲಿ ಮೃತ ವ್ಯಕ್ತಿಯು ಕೆಎ-02-ಜೆಜಿ-7493 ಬೈಕ್ ನಲ್ಲಿ ಎಸ್. ಎಲ್. ಎನ್ ದೋಸೆ ಮನೆ ಹೋಟಲ್ ಸಮೀಪ ಚಾಲನೆ ಮಾಡಿಕೊಂಡು ಬರುತ್ತಿದ್ದಾಗ ಮಾಗಡಿ ಕಡೆಯಿಂದ ಬೆಂಗಳೂರು ಕಡೆಗೆ ಹೋಗುತ್ತಿದ್ದ ಕೆಎ-11-ಆರ್-5984 ಬೈಕ್

ಚಾಲಕ ಬೈಕನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮುಂದೆ ಹೋಗುತ್ತಿದ್ದ ಮೃತ ವ್ಯಕ್ತಿಯ ಬೈಕಿಗೆ ಹಿಂದಿನಿಂದ ಡಿಕ್ಕಿ ಪಡಿಸಿದ್ದ ಪರಿಣಾಮ ಅವರು ಬೈಕ್ ಸಮೇತ ಕೆಳಗೆ ಬಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಮೃತ ವ್ಯಕ್ತಿಯ ತಲೆಗೆ ಮತ್ತು ಕಾಲುಗಳಿಗೆ ಪೆಟ್ಟು ಬಿದ್ದು ಪ್ರಜ್ಞಾಹೀನರಾಗಿದ್ದು, ಚಿಕಿತ್ಸೆಗಾಗಿ ಅನುಪಮಾ ಆಸ್ಪತ್ರೆಗೆ ಸೇರಿಸಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಯಶವಂತಪುರದ ಕೊಲಂಬಿಯಾ ಏಷಿಯಾ ಆಸ್ಪತ್ರೆಗೆ ಸೇರಿದ್ದು, ಚಿಕಿತ್ಸೆ ಫಲಕಾರಿಯಾಗದೇ ದಿ.22-08-2018 ರಂದು ಬೆಳಗ್ಗೆ 5.20 ಗಂಟೆಗೆ ಆಸ್ಪತ್ರೆಯಲ್ಲಿ ಮೃತ ಪಟ್ಟಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಪಾಟೀ **ಸವಾಲುಃ- ಆರೋಪಿಯ ಪರ ಶ್ರೀ.ಎಸ್.ಬಿ , ವಕೀಲರಿಂದಃ-**

ನೀವು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನನಗೆ ಆರೋಪಿಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

**ಮರುವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ - 454/2019**
**ಚಾಸಾ - 03 / ಪ್ರಾಸಾ - 03**

| | |
|---|---|
| ಹೆಸರು | **ಮಹೇಶ್** |
| ತಂದೆಯ ಹೆಸರು | **ಬ್ಯಾಟಪ್ಪ** |
| ವಯಸ್ಸು | **36** |
| ಉದ್ಯೋಗ | **ಖಾಸಗಿ ಕೆಲಸ** |
| ವಿಳಾಸ | **ತಾವರೆಕೆರೆ** |

**ದಿನಾಂಕಃ 16-10-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಮೃತ ವ್ಯಕ್ತಿಯು ನನ್ನ ತಂದೆ. ಚಾಸಾ-1ರವರು ನನ್ನ ಚಿಕ್ಕಪ್ಪ. ಸುಮಾರು 8 ವರ್ಷಗಳ ಹಿಂದೆ ಹೊನ್ನಗನಗಟ್ಟಿಯಲ್ಲಿ ಇರುವ ದೋಸೆ ಮನೆ ಹತ್ತಿರ ಯಾರೋ ಹಿಂದಿನಿಂದ ಬಂದು ನನ್ನ ತಂದೆಯ ವಾಹನಕ್ಕೆ ಡಿಕ್ಕಿಪಡಿಸಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಈಗ ಸಾಕ್ಷಿಗೆ ಇಂಡೆಮಿನಿಟಿ ಬಾಂಡ್‌ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಬಾಂಡ್ ನ್ನು ನು ನಿಪಿ-5 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ನಾನು ನನ್ನ ವಾಹನವನ್ನು ಬಿಡುಗಡೆ ಮಾಡಿಕೊಳ್ಳು ವ ಸಮಯದಲ್ಲಿ ನನ್ನ ಸಹಿಯನ್ನು ನಿಪಿ-5ಕ್ಕೆ ಹಾಕಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

ಪಾಟೀ **ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿ.21-08-2018ರಂದು ಬೆಳಗ್ಗೆ 8.20 ಗಂಟೆಗೆ ನಿಮ್ಮ ತಂದೆಯವರು ಅವರಿಗೆ ಸೇರಿದ ಕೆಎ-02-ಜೆಜಿ-7493 ಬೈಕ್ ನಲ್ಲಿ ಎಸ್.ಎಲ್.ಎನ್ ದೋಸೆ ಮನೆ ಹೋಟಲ್ ಸಮೀಪ ಚಾಲನೆ ಮಾಡಿಕೊಂಡು ಬರುತ್ತಿದ್ದಾಗ ಮಾಗಡಿ ಕಡೆಯಿಂದ

ಬೆಂಗಳೂರು ಕಡೆಗೆ ಹೋಗುತ್ತಿದ್ದ ಕೆಎ-11-ಆರ್-5984 ಬೈಕ್ ಚಾಲಕ ಬೈಕನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮುಂದೆ ಹೋಗುತ್ತಿದ್ದ ಮೃತ ವ್ಯಕ್ತಿಯ ಬೈಕಿಗೆ ಹಿಂದಿನಿಂದ ಡಿಕ್ಕಿ ಪಡಿಸಿದ್ದ ಪರಿಣಾಮ ಅವರು ಬೈಕ್ ಸಮೇತ ಕೆಳಗೆ ಬಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಮೃತ ವ್ಯಕ್ತಿಯ ತಲೆಗೆ ಮತ್ತು ಕಾಲುಗಳಿಗೆ ಪೆಟ್ಟು ಬಿದ್ದು ಪ್ರಜ್ಞಾಹೀನರಾಗಿದ್ದು, ಚಿಕಿತ್ಸೆಗಾಗಿ ಅನುಪಮಾ ಆಸ್ಪತ್ರೆಗೆ ಸೇರಿಸಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಯಶವಂತಪುರದ ಕೊಲಂಬಿಯಾ ಏಷಿಯಾ ಆಸ್ಪತ್ರೆಗೆ ಸೇರಿದ್ದು, ಚಿಕಿತ್ಸೆ ಫಲಕಾರಿಯಾಗದೇ ದಿ.22-08-2018 ರಂದು ಬೆಳಗ್ಗೆ 5.20 ಗಂಟೆಗೆ ಆಸ್ಪತ್ರೆಯಲ್ಲಿ ಮೃತ ಪಟ್ಟಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಅಪಘಾತಕ್ಕೆ ಸಂಬಂಧಿಸಿದಂತೆ ನೀವು ದಿ.11-09-2018 ರಂದು ನಿಪಿ-5ರಂತೆ ನಿಮ್ಮ ವಾಹನವನ್ನು ಬಿಡುಗಡೆ ಮಾಡಿಸಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಪಾಟೀ **ಸವಾಲುಃ- ಆರೋಪಿಯ ಪರ ಶ್ರೀ.ಎಸ್.ಬಿ , ವಕೀಲರಿಂದಃ-**

ಆರೋಪಿಗಳ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಯಾವುದೇ ಸೂಕ್ತ ಕಾರಣವನ್ನು ತಿಳಿಸದೇ ಇರುವ ಕಾರಣ ಪಾಟೀ ಸವಾಲು ಇರುವುದಿಲ್ಲ ಎಂದು ಪರಿಗಣಿಸಲಾಯಿತು.

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**